ಜೇವರ್ಗಿ ನಾಲಾ ವಿಭಾಗವನ್ನು ಪೂರ್ಣಗೊಳಿಸುವುದು

೩೮೮ (೧೮೭೯) ಶ್ರೀ ಶಿವಶೇಖರಪ್ಪ ಗೌಡ ಶಿಂವಾಳ (ಶಹಾಪುರ):- ಮಾನ್ಯ ಭಾರಿ ಮತ್ತು ಮಾಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪ್ರಸಕ್ತ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಜೇವರ್ಗಿ ಬ್ರಾಂಚ್ ನಾಲಾ ಕೆಲಸ ಪ್ರಾರಂಭವಾಗಲಿದೆಯೇ ?

ಆ) ಇದಕ್ಕೆ ವಿಶ್ವ ಬ್ಯಾಂಕ್‌ನ ನೆರವು ಸಿಕ್ಕಿದೆಯೇ ?

ಇ) ಹಾಗಿದ್ದಲ್ಲಿ, ಸದರಿ ನಾಲಾ ಕೆಲಸವನ್ನು ಮುಗಿಸಿ ರೈತರಿಗೆ ನೀರು ಒದಗಿಸಲು ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಜೇವರ್ಗಿ ಉಪ ಕಾಲುವೆಯ ಪೊದಲು ಹದಿಮೂರು ಕಿಲೋಮೀಟರುಗಳ ಕಾಮಗಾರಿಯನ್ನು ಪ್ರಾರಂಭಿಸಲು ಈಗಾಗಲೇ ದಿನಾಂಕ ೩೦-೧೨-೧೧ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿದ್ದು, ಸಧ್ಯದಲ್ಲೇ ಕೆಲಸವನ್ನು ಪ್ರಾರಂಭಿಸಲಾಗುವುದು.

ಆ) ವಿಶ್ವ ಬ್ಯಾಂಕ್ ನೆರವಿಗೆ ಪ್ರಸ್ತಾವನೆಯನ್ನು ಮುಂದೊಡಲಾಗುತ್ತಿದೆ.

ಇ) ಈ ಉಪ ನಾಲೆಯ ಕಾಮಗಾರಿಗಳನ್ನು ೧೯೯೬ರ ಒಳಗೆ ಸಂಪೂರ್ಣವಾಗಿ ಮುಗಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿಗಾಗಿ ಕಾಯ್ದಿರಿಸಿದ ಹಣ

೩೮೯ (೧೮೮೨) ಶ್ರೀ ಎಂ. ರುಕ್ಮಯ ಪೂಜಾರಿ (ವಿಟ್ಲ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ೧೯೯೧-೯೨ನೇ ವರ್ಷದಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿಗೆ ಎಷ್ಟು ಹಣ ಕಾಯ್ದಿರಿಸಲಾಗಿದೆ; ಆದರಲ್ಲಿ ೧೯೯೨ನೇ ಫೆಬ್ರುವರಿವರಗೆ ಎಷ್ಟು ಹಣ ಖರ್ಚಾಗಿದೆ ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಧಿಕ ಮಳೆ ಈ ವರ್ಷ ಬಂದಿರುವುದರಿಂದ ಹೆಚ್ಚಿನ ಲೋಕೋಪಯೋಗಿ ರಸ್ತೆಗಳು ಹಾಳಾಗಿರುವುದರಿಂದ ರಸ್ತೆಗಳ ದುರಸ್ತಿಗಾಗಿ ಇನ್ನೂ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದೇ ?

ಇ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ಲೋಕೋಪಯೋಗಿ ರಸ್ತೆಯ ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣ ಸರ್ಕಾರ ಖರ್ಚು ಮಾಡಿದೆ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಯವರು):-

ಅ) ೧೯೯೧-೯೨ನೇ ಸಾಲಿನಲ್ಲಿ ೪೦೧೦ ಲಕ್ಷ ರೂ. ಗಳನ್ನು ಲೋಕೋಪಯೋಗಿ ಇಲಾಖೆ ರಸ್ತೆ ಮತ್ತು ಸೇತುವೆಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಗಾಗಿ ನಿಗದಿಪಡಿಸಿದೆ. ಆದರಲ್ಲಿ ಫೆಬ್ರುವರಿ ೯೨ರವರಗೆ ೩೮೫೦ ಲಕ್ಷ ರೂ. ಗಳು ವೆಚ್ಚವಾಗಿವೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೯೧-೯೨ನೇ ಸಾಲಿನ ಅಧಿಕ ಮಳೆಯಿಂದ ಹಾನಿಯಾಗಿರುವ

ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳನ್ನು ದುರಸ್ತಿಪಡಿಸುವುದಕ್ಕೆ ೬೦ ಲಕ್ಷ ರೂ.ಗಳ ಹೆಚ್ಚಿನ ವಿಶೇಷ ಅನುದಾನವನ್ನು ನೀಡಲಾಗಿದೆ.

೧) ೧೯೯೧-೯೨ನೇ ಸಾಲಿನಲ್ಲಿ ವಿಟ್ಲದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ ಮಾಡಿರುವ ವೆಚ್ಚದ ವಿವರ ಕೆಳಕಂಡಂತಿದೆ:-

ರಸ್ತೆ ಹೆಸರು	ವೆಚ್ಚ (ಲಕ್ಷ ರೂ.ಗಳಲ್ಲಿ)
೧) ಕಲ್ಲಡಕ-ಕಣಂಗಾಡು ರಸ್ತೆ	೪.೯೬
೨) ವಿಟ್ಲ-ತಾಲೆತ್ತೂರು ರಸ್ತೆ	೭.೦೬
೩) ಪಾಣೆಮಂಗಳೂರು-ವಾತೂರು ರಸ್ತೆ	೪.೪೩
೪) ಕಡೂರು-ಬಂಟ್ವಾಳ ರಸ್ತೆ	೧.೪೨
೫) ಕೊಟ್ಟಕಾರು-ವಾತೂರು ರಸ್ತೆ	೦.೩೧
೬) ಬಂಟ್ವಾಳ-ಕೂಲಲಿ-ಗುರುಪುರ ರಸ್ತೆ	೨.೨೪
೭) ವಿಟ್ಲ-ಕಬಕ ರಸ್ತೆ	೦.೩೧
೮) ಪಾಣೆ-ಮಂಗಳೂರು-ಟೌನ್ ರಸ್ತೆ	೦.೦೪
ಒಟ್ಟು	೨೦.೭೭

ಮಂಡಲ ಪಂಚಾಯತ್ ನೌಕರರಿಗೆ ಸೌಲಭ್ಯ

೬೯೦ (೧೯೬೬) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದ ಮಂಡಲ ಪಂಚಾಯಿತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ 'ಸಿ' ಮತ್ತು 'ಡಿ' ವರ್ಗದ ನೌಕರರಿಗೆ ಸರ್ಕಾರಿ ನೌಕರರಿಗಿರುವ ವೇತನ, ಭತ್ಯೆ ಹಾಗೂ ಇತರೆ ಸೇವಾ ಸೌಲಭ್ಯ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ)

ಮಂಡಲ ಪಂಚಾಯತ್ ನೌಕರರು ತಮ್ಮ ಸೇವಾ ಸೌಲಭ್ಯಗಳಿಗಾಗಿ ನ್ಯಾಯಯುತ ಹೋರಾಟ ನಡೆಸುತ್ತ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಬಗ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಹೌದು.